**ದಿನಾಂಕಃ 02.07.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ ಎಲ್ ವಿ., 9 ಮತ್ತು 10 ನೇ ಪ್ರತಿವಾದಿ ಪರ ವಕೀಲರಿಂದ**

ಸಾಕ್ಷಿಯು ಕನ್ನಡ ಭಾಷೆ ಬರುವುದಿಲ್ಲ ತೆಲುಗು ಭಾಷೆ ಬರುತ್ತದೆ ಎಂದು ಹೇಳಿದ್ದರಿಂದ ಕನ್ನಡ ಮತ್ತು ತೆಲುಗು ಭಾಷೆ ತಿಳಿದಿರುವ ಶ್ರೀ ಸಿಎಸ್., ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಲಾಯಿತು. ಭಾಷಾ ತರ್ಜುಮೆದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**2.** ರಾಮೇಗೌಡ ರವರ ತಾಯಿ ರಾಮಕ್ಕನನ್ನು ನಾನು ನೋಡಿರುವುದಿಲ್ಲ. ನಾನು ರಾಮೇಗೌಡ ರವರನ್ನು ನೋಡಿದ್ದು ಸದರಿಯವರು ತೀರಿಕೊಂಡು ಸುಮಾರು 20 ವರ್ಷಗಳಾಗಿವೆ. ರಾಮೇಗೌಡರವರ ಊರಾದ ಉಗಣಿಯಿಂದ ನನ್ನ ಊರಾದ ಗೋಣಿಕುಪ್ಪ ಗ್ರಾಮಕ್ಕೆ ಸುಮಾರು 3 ಕಿ.ಮೀ ಅಂತರವಿದೆ. ವ್ಯಾಜ್ಯದ ಜಮೀನುಗಳು ಗೋಣಿಕುಪ್ಪದಲ್ಲಿರುತ್ತವೆ.

**3.** ರಾಮೇಗೌಡರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯೂ ನನಗೆ 3 ಜನ ಮಾತ್ರ ಗೊತ್ತು ಎನ್ನುತ್ತಾರೆ ಅವರುಗಳೆಂದರೆ 1) ನಾರಾಯಣಗೌಡ ಹಾಗೂ ಇನ್ನಿಬ್ಬರ ಹೆಸರುಗಳು ನನಗೆ ಗೊತ್ತಿಲ್ಲ. ರಾಮೇಗೌಡ ರವರಿಗೆ 3 ಜನ ಹೆಣ್ಣು ಮಕ್ಕಳು ಅವರುಗಳು 1) ನಾಗರತ್ನಮ್ಮ, 2) ಪುಷ್ಪ ಹಾಗೂ 3) ರಮಾದೇವಿ ಎಂದರೆ ನನಗೆ ಗೊತ್ತಿಲ್ಲ. ರಾಮೇಗೌಡ ರವರಿಗೆ 3 ಜನ ಗಂಡು ಮಕ್ಕಳು ಅವರುಗಳೆಂದರೆ 1) ನಾರಾಯಣಗೌಡ, 2) ಅಪ್ಪೆಗೌಡ ಹಾಗೂ 3) ಸೋಮೇಗೌಡ ಎಂದರೆ ಸರಿ. ರಾಮೇಗೌಡ ತೀರಿಕೊಂಡ ನಂತರ ಅವರ ತಾಯಿ ರಾಮಕ್ಕ ಹಾಗೂ ಮಕ್ಕಳಾದ 1) ನಾರಾಯಣಗೌಡ, 2) ಅಪ್ಪೆಗೌಡ ಹಾಗೂ 3) ಸೋಮೇಗೌಡ ಇವರೇ ವಾರಸ್ಸುದಾರರು ಇದ್ದು ವ್ಯಾಜ್ಯದ ಜಮೀನುಗಳಲ್ಲಿ ಅವರುಗಳೇ ಸ್ವಾಧಿನನುಭವದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**4.** ಸರ್ವೇ ನಂ. 5 ರಲ್ಲಿ ಒಟ್ಟು 2 ಎಕರೆ ಜಮೀನು ರಾಮೇಗೌಡನ ಹೆಸರಿನಲ್ಲಿ 1962 ರಿಂದ ರಾಮಕ್ಕನ ಹೆಸರಿನಲ್ಲಿದ್ದು ಆಕೆ ತೀರಿಕೊಂಡ ನಂತರ ಮಗನಾದ ರಾಮೇಗೌಡನ ಹೆಸರಿಲ್ಲಿ ನಮೂದು ಆಗಿದ್ದು, ರಾಮೇಗೌಡ ತೀರಿಕೊಂಡ ನಂತರ ಆತನ ಮಕ್ಕಳಾದ 1) ನಾರಾಯಣಗೌಡ, 2) ಅಪ್ಪೆಗೌಡ ಹಾಗೂ 3) ಸೋಮೇಗೌಡ ರವರ ಹೆಸರುಗಳು ಕಂದಾಯ ದಾಖಲೆಗಳಲ್ಲಿ ನಮೂದು ಇರುತ್ತವೆ ಎಂದರೆ ಸಾಕ್ಷಿಯೂ ನನ್ನ ತಾತನ ಹೆಸರಿನಲ್ಲಿರುತ್ತವೆ ಎಂದು ನುಡಿಯುತ್ತಾರೆ. ಸರ್ವೇ ನಂ. 5 ರ ಜಮೀನು ಕಾಮಟ್ಟೆ ಗೋವಿಂದಪ್ಪನಿಗೆ ಮಂಜೂರಾದ ಜಮೀನು ಎಂದರೆ ಸರಿ.

**5.** ದಿ. 01.07.1958 ರಂದು ಕಾಮಟ್ಟಿ ಗೋವಿಂದಪ್ಪ ರಾಮಕ್ಕನ ಕೋಂ ಸೊಣ್ಣೆಗೌಡ ರವರಿಗೆ 2 ಎಕರೆ ಜಮೀನನ್ನು ಸರ್ವೇ ನಂ. 5 ರಲ್ಲಿ 2 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ 2 ಎಕರೆ ಜಮೀನಿನ ಖಾತೆ ಕ್ರಯ ಪತ್ರದಂತೆ ರಾಮಕ್ಕನ ಹೆಸರಿನಲ್ಲಿ ನಮೂದಾಗಿದು ಆಕೆ ತೀರಿಕೊಂಡ ನಂತರ ಮಗನಾದ ಪಟೇಲ್ ರಾಮೆಗೌಡನ ಹೆಸರಿಗೆ ನಮೂದಗಿದ್ದು ಎಂದರೆ ಸರಿ. ಪಟೇಲ್ ರಾಮೆಗೌಡ ತೀರಿಕೂಂಡ ನಂತರ ಆತನ ಮಗನಾದ 9 ನೇ ಪ್ರತಿವಾದಿ ನಾರಾಯಣಗೌಡನ ಹೆಸರು ಕಂದಾಯ ದಾಖಲೆಗಳಲ್ಲಿ ನಮೂದಾಗಿದ್ದು ಈಗಲೂ ಆತನ ಹೆಸರಿನಲ್ಲಿ ಮುಂದುವರೆದುಕೊಂಡು ಬಂದಿರುತ್ತವೆ ಎಂದರೆ ಸರಿ. ಅವರುಗಳೇ ಸದರಿ ಜಮೀನಿನಲ್ಲಿ ಬಿತ್ತನೆ ಮಾಡಿಕೊಂಡು ಬೆಳೆ ಬೆಳೆದುಕೊಳ್ಳುತ್ತಾರೆ ಎಂದರೆ ಸಾಕ್ಷಿಯೂ ಅವರ ಜಮೀನಿನಲ್ಲಿ ಅವರು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಉಳಿದ ಜಮೀನನ್ನು ಎಂ. ನಾಗರಾಜು ಅಂದರೆ ನನ್ನ ಮಗ, ಜೋಗಿ ನಾಗಪ್ಪ, ವೆಂಕಟೇಶಪ್ಪ, ಲಕ್ಷ್ಮಿನಾರಾಯಣ ಹಾಗೂ ವೆಂಕಟರಾಮಪ್ಪ ಬಿನ್ ರಾಮಸ್ವಾಮಿ ಇವರುಗಳೆಲ್ಲರೂ ಸೇರಿ ಕ್ರಯದ ಕರಾರು ಪತ್ರದ ಮೂಲಕ ಸುಧಾ ರವರ ಗಂಡ ಶಿವಶಂಕರ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

**6.** 1 ನೇ ವ್ಯಾಜ್ಯದ ಸ್ವತ್ತಾದ ಸರ್ವೇ ನಂ. 3/1 ರ ವಿಸ್ತೀರ್ಣ 7 ಎಕರೆ 13 ಗುಂಟೆ ಇರುತ್ತದೆ. ಅದರ ಖಾತೆ ಪಹಣಿ ನನ್ನ ತಾತನ ಹೆಸರಿನಲ್ಲಿ ಬರುತ್ತಿದೆ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾಖಲೆಗಳನ್ನು ಪರಿಶೀಲಿಸಿ ನೋಡಿದಾಗ ನನ್ನ ತಾತನ ಹೆಸರಿನಲ್ಲಿಯೇ ನಮೂದು ಇದ್ದವೂ. ನಾನು ಹಾಜರು ಪಡಿಸಿರುವಂತಹ ಎಲ್ಲಾ ದಾಖಲೆಗಳಲ್ಲಿ ರಾಮಕ್ಕ, ಅವರ ಮಗ ರಾಮೇಗೌಡ ಹಾಗೂ ರಾಮೆಗೌಡನ ಮಕ್ಕಳಾದ 1) ನಾರಾಯಣಗೌಡ, 2) ಅಪ್ಪೇಗೌಡ ಹಾಗೂ 3) ಸೊಮೇಗೌಡ ರವರ ಹೆಸರುಗಳು ನಮೂದು ಇರುತ್ತವೆಯೇ ಹೊರತು ನನ್ನ ತಾತನ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

**7.** ನಾರಾಯಣಗೌಡನ ಹೆಸರಿಗೆ ನಮೂದಾಗಿದ್ದ ಕಂದಾಯ ದಾಖಲೆಗಳನ್ನು ಪ್ರಶ್ನಿಸಿ ನಾನು, ಅಣ್ಣ ಹಾಗೂ ನನ್ನ ತಮ್ಮ ಸೇರಿಕೊಂಡು ಎಸಿ ನ್ಯಾಯಾಲಯದಲ್ಲಿ ಆರ್ ಎ ನಂ. 57/2019 ರಂತೆ ಅಫೀಲನ್ನು ದಾಖಲಿಸಿದ್ದು ಅದು ವಜಾಗೊಂಡಿದೆ ಎಂದರೆ ಸಾಕ್ಷಿಯೂ ಉತ್ತರಿಸದೇ ಸುಮ್ಮನೆ ನಿಂತಿರುತ್ತಾರೆ. ಸಾಕ್ಷಿಗೆ ಪುನಃ ಅದೇ ಪ್ರಶ್ನೆಯನ್ನು ಕೇಳಲಾಗಿ ಈಗಲೂ ಕೂಡ ಉತ್ತರಿಸದೇ ಸುಮ್ಮನೆ ನಿಂತಿರುತ್ತಾರೆ.

**8.** ದಿ. 16.02.1962 ರಂದು ನನ್ನ ಚಿಕ್ಕಪ್ಪ ಜೋಗಿ ರಾಮಸ್ವಾಮಿ ತನ್ನ ಭಾಗದ 1 ಎಕರೆ 28 ಗುಂಟೆ ಜಮೀನನ್ನು ಸರ್ವೆ ನಂ. 3/1 ರಲ್ಲಿ ಪಟೇಲ್ ರಾಮೆಗೌಡ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ವೆಂಕಟರಾಮಪ್ಪ ಬಿನ್ ಮುನಿಸ್ವಾಮಿ ನನ್ನ ದೊಡ್ಡಪ್ಪನಾಗಬೇಕು. ನಂತರ ನನ್ನ ದೊಡ್ಡಪ್ಪ ವೆಂಕಟರಾಮಪ್ಪ ರವರು ಸರ್ವೇ ನಂ. 3/1 ರ

ಒಟ್ಟು ವಿಸ್ತೀರ್ಣವಾದ 7 ಎಕರೆ 13 ಗುಂಟೆ ಜಮೀನನ್ನು ತಾನೇ ಮಾಲೀಕನೆಂದು ಕ್ರಯ ಪತ್ರದಲ್ಲಿ ಹೇಳಿ ಬರೆಸಿ ಪಟೇಲ್ ರಾಮೆಗೌಡನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಇನ್ನೊಬ್ಬ ಚಿಕ್ಕಪ್ಪ ಸರ್ವೇ ನಂ. 3/1 ರಲ್ಲಿ ತನ್ನ ಭಾಗದ 1 ಎಕರೆ 28 ಗುಂಟೆ ಜಮೀನನ್ನು ದಿ. 11.09.1971 ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮೇಲಿನ ಕ್ರಯ ಪತ್ರದಂತೆ ಸರ್ವೇ ನಂ. 3/1 ರ ಒಟ್ಟು ವಿಸ್ತೀರ್ಣವಾದ 7 ಎಕರೆ 13 ಗುಂಟೆ ಜಮೀನನ್ನು ಪಟೇಲ್ ರಾಮೆಗೌಡನಿಗೆ ಮಾರಾಟ ಮಾಡಿದ್ದು ಅವರೇ ಅದರ ಸ್ವಾಧಿನಾನುಭವದಲ್ಲಿದ್ದು ಅವರು ತೀರಿಕೊಂಡ ನಂತರ ಅವರ ಮಕ್ಕಳು ಮಾಲೀಕರಾಗಿ ಸ್ವಾಧಿನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

**9.** ಸರ್ವೇ ನಂ. 3/1 ರ ಒಟ್ಟು ವಿಸ್ತೀರ್ಣವಾದ 7 ಎಕರೆ 13 ಗುಂಟೆ ಜಮೀನಲ್ಲಿ ಮಾವಿನ ತೋಟ ಇದೆ ಎಂದರೆ ಸಾಕ್ಷಿಯೂ ನಾನೇ ಇಟ್ಟಿರುವುದು ಎಂದು ನುಡಿಯುತ್ತಾರೆ. ದಾವೆಯನ್ನು ದಾಖಲಿಸುವ ಕಾಲಕ್ಕೆ 7 ಎಕರೆ 13 ಗುಂಟೆ ಜಮೀನಿನಲ್ಲಿ ಮಾವಿನ ತೋಟ ಇರುವುದಾಗಿ ವಕೀಲರಿಗೆ ತಿಳಿಸಿರುವುದಿಲ್ಲ. ಸಾಕ್ಷಿಯೂ ಮುಂದುವರೆದು ದಾವೆಯನ್ನು ದಾಖಲಿಸಿದ ನಂತರ ಮಾವಿನ ಗಿಡಗಳನ್ನು ನೆಟ್ಟಿರುತ್ತೇನೆಂದು ನುಡಿಯುತ್ತಾರೆ. 1980 ನೇ ಇಸವಿಯಲ್ಲಿ ಪಟೇಲ್ ರಾಮೇಗೌಡ ರವರು ಮಾವಿನ ಗಿಡಗಳನ್ನು ನೆಟ್ಟಿದ್ದು ನಾನು ಹೇಳುವಂತೆ ದಾವೆ ದಾಖಲಿಸಿದ ನಂತರ ನೆಟ್ಟಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 3/1 ರ ಜಮೀನಿಗೆ ನನ್ನ ತಾತ ಕಂದಾಯ ಕಟ್ಟಿದ್ದು ನಾನು ಕಟ್ಟಿರುವುದಿಲ್ಲ. ನನ್ನ ತಾತ ಕಂದಾಯ ಕಟ್ಟಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ನಾನು ಹೇಳುವಂತೆ ನನ್ನ ತಾತ ಎಂದಿಗೂ ಕಂದಾಯ ಕಟ್ಟಿಲ್ಲ ಹಾಗೂ ಕಂದಾಯ ಕಟ್ಟಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಸರ್ವೇ ನಂ. 3/1 ರ ಜಮೀನಿಗೆ ಸಂಬಂದಿಸಿದಂತೆ ನನ್ನ ಹೆಸರಿಗಾಗಲಿ, ನನ್ನ ತಂದೆ ಹಾಗೂ ನನ್ನ ತಾತನ ಹೆಸರಿಗಾಗಲಿ ಎಂದಿಗೂ ಕಂದಾಯ ದಾಖಲೆಗಳು ನಮೂದಾಗಿಲ್ಲ ಎಂದರೆ ಸರಿಯಲ್ಲ.

**10.** ಮಾರಾಟವಾಗಿರುವ ಬಗ್ಗೆ ನನಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯೂ ಮೊದಲು ಇಲ್ಲಿಯವರೆಗೆ ಗೊತ್ತಿರಲಿಲ್ಲ ಎಂದು ನುಡಿದು ಪುನಃ ಮುಂದುವರೆದು ಸುಮಾರು 5 ವರ್ಷಗಳ ಹಿಂದೆ ಗೊತ್ತಾಯಿತು ಎಂದು ನುಡಿಯುತ್ತಾರೆ. ವ್ಯಾಜ್ಯದ ಜಮೀನುಗಳಲ್ಲಿ ನನಗೆ ಯಾವುದೇ ಹಕ್ಕುಗಳಿಲ್ಲ ಹಾಗೂ ಅವುಗಳು ಮಾರಾಟವಾಗಿರುವ ಬಗ್ಗೆ ನನಗೆ ಬಹಳ ವರ್ಷಗಳಿಂದ ಗೊತ್ತಿದ್ದರೂ ಕೂಡ ಅಕ್ರಮ ಲಾಭ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ದಾವಾ ಆಸ್ತಿ ವಿಸ್ತೀರ್ಣ 7 ಎಕರೆ 13 ಗುಂಟೆ ಜಮೀನು ಹಾಗೂ 2 ನೇ ದಾವಾ ಅಸ್ತಿಯ ಒಟ್ಟು ವಿಸ್ತೀರ್ಣ ಪೈಕಿ 2 ಎಕರೆ ಜಮೀನಿನಲ್ಲಿ ಕೇವಲ 7 ರಿಂದ 9 ನೇ ಪ್ರತಿವಾದಿಗಳಿಗೆ ಹಕ್ಕು ಇದ್ದು ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. 7 ರಿಂದ 9 ನೇ ಪ್ರತಿವಾದಿಗಳು ಸರ್ವೇ ನಂ. 3/1 ರ ಜಮೀನನ್ನು ಅಡಮಾನ

ಮಾಡಿ ಗ್ರಾಮೀಣ ಬ್ಯಾಂಕಿನಿಂದ ಸಾಲ ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಸಾಲದ ಹಣವನ್ನು ಮಾವಿನ ಫಸಲನ್ನು ಅಭಿವೃದ್ದಿ ಪಡಿಸಲು ಉಪಯೋಗಿಸಲಾಗಿದೆ ಎಂದರೆ ಸರಿಯಲ್ಲ. ಮಾವಿನ ಫಸಲನ್ನು ಪ್ರತಿವರ್ಷ ಮಾರಾಟ ಮಾಡುವ ಕುರಿತು ಬೇರೆಯವರೊಂದಿಗೆ ಕರಾರನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.